**5**

## ಮೂಲ ವಾಕ್ಯ: ಮತ್ತಾಯ 26:20-29

# ಕರ್ತನ ಭೋಜನದ ನಿಯಮ

ಕ್ರೂಜೆಯ ಮರಣದ ಮೊದಲು, ಯೇಸು ಗಲಿಲಾಯದಿಂದ ಸಮಾರ್ಯದ ಮೂಲಕ ಯೆರೂಸಲೇಮಿಗೆ ಬರುವಾಗ, ಹತ್ತು ಜನ ಕುಷ್ಟರೋಗಿಗಳನ್ನು ವಾಸಿಮಾಡಿದ ಪಟ್ಟಣಕ್ಕೆ ಬಂದನು (ಲೂಕ 17:11-19). ಅಲ್ಲಿ ಕೆಲವು ಪಾಠಗಳನ್ನು ಮುಗಿಸಿ, ಆತನು ಯುದಾಯಕ್ಕೆ ಬಂದನು (ಮಾರ್ಕ 10:1). ಆತನು ಯೆರಿಕೋ ಪಟ್ಟಣವನ್ನು ಹಾದು (ಮಾರ್ಕ 10:46), ಬೇಥಾನ್ಯಕ್ಕೆ ಬಂದನು (ಲೂಕ 19:11). ಅಲ್ಲಿ ಆತನು ತಡಮಾಡದೆ ಕತ್ತೆಯನ್ನು ಹತ್ತಿ ಯೆರೂಸಲೇಮಿಗೆ ಹೋದನು (ಮಾರ್ಕ 11:1-11; ಲೂಕ 19:29-44), ದೇವಾಲಯದಲ್ಲಿ ವ್ಯಾಪಾರಸ್ತರನ್ನು ಹೊರಡಿಸಿಬಿಟ್ಟನು (ಮಾರ್ಕ 11:15-18). ಕುಷ್ಟ ರೋಗಿಯಾದ ಸೀಮೋನನ ಮನೆಯಲ್ಲಿ ಆತನ ಮರಣವನ್ನು ನೆನಪಿಸುವಂತೆ ಒಬ್ಬ ಸ್ತ್ರೀ ಆತನಿಗೆ ಸುಗಂಧ ತೈಲದಿಂದ ಅಭಿಷೇಕ ಮಾಡಿದಳು (ಮಾರ್ಕ 14:3-9). ರಾತ್ರಿ ಕಾಲದಲ್ಲಿ ಆತನು ಬೇಥಾನ್ಯದಲ್ಲಿ ತಂಗಿದ್ದು, ಹಗಲಿನಲ್ಲಿ ಯೆರೂಸಲೇಮಿಗೆ ತೆರಳುತ್ತಿದ್ದನು (ಲೂಕ 21:37, 38).

ಮತ್ತಾಯ 26:1, 2ರಲ್ಲಿ, ಪಸ್ಕವು ಎರಡು ದಿನಗಳಲ್ಲಿರುವಾಗಲೇ, ಯೇಸು ತನ್ನ ಮರಣದ ಕುರಿತು ತನ್ನ ಅನುಯಾಯಿಗಳಿಗೆ ತಿಳಿಸಿದನು. ಇದಾದ ತಕ್ಷಣ ಯೂದನು ಯೇಸುವನ್ನು ಹಿಂಸಿಸಲು ಅವರಿಗೆ ಹಿಡಿದುಕೊಡುವದಕ್ಕಾಗಿ ಆತನು ಮೂವತ್ತು ಬೆಳ್ಳಿ ರೂಪಾಯಿಗಳಿಗೆ ಒಪ್ಪಿದನು (ಮತ್ತಾಯ 26:3-16; ಲೂಕ 22:1-6).

### ಪಸ್ಕ ಹಬ್ಬ

> ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿವಸ, ಅಂದರೆ ಪಸ್ಕದ ಕುರಿಮರಿಯನ್ನು ಕೊಯ್ಯುವ ದಿವಸ, ಆತನ ಶಿಷ್ಯರು, "ನೀನು ಪಸ್ಕದ ಊಟ ಮಾಡುವಂತೆ ನಾವು ಎಲ್ಲಿ ಹೋಗಿ ಸಿದ್ಧಮಾಡಬೇಕನ್ನುತ್ತೀ?" (ಮಾರ್ಕ 14:12).

> ಯೇಸು ಪೇತ್ರನಿಗೂ ಯೋಹಾನನಿಗೂ - ನೀವು ಹೋಗಿ ನಾವು ಪಸ್ಕದ ಊಟಮಾಡುವಂತೆ ಸಿದ್ಧಮಾಡಿರಿ ಎಂದು ಹೇಳಿ ಅವರನ್ನು ಕಳುಹಿಸಿದನು. ಅವರು - ನಾವು ಎಲ್ಲಿ ಸಿದ್ಧಮಾಡಬೇಕನ್ನುತ್ತೀ ಎಂದು ಆತನನ್ನು ಕೇಳಲು ಆತನು ಅವರಿಗೆ - ನೋಡಿರಿ, ನೀವು ಪಟ್ಟಣದೊಳಕ್ಕೆ ಹೋದ ಮೇಲೆ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತು ಕೊಂಡು ನಮ್ಮೆದುರಿಗೆ ಬರುವನು. ಅವನು ಹೋಗುವ ಮನೆಗೆ ನೀವು ಅವನ ಹಿಂದೆ ಹೋಗಿ ಆ ಮನೆಯ ಯಜಮಾನನಿಗೆ - ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವದಕ್ಕೆ ಭೋಜನಶಾಲೆ ಎಲ್ಲಿ ಎಂದು ನಿನ್ನನ್ನು ಕೇಳುತ್ತಾನೆ ಎಂಬುದಾಗಿ ಹೇಳಿರಿ. ಅವನು ತಕ್ಕ ಸಾಮಾನಿಟ್ಟಿರುವ ಮೇಲಂತಸ್ತಿನ ದೊಡ್ಡ ಕೊಠಡಿಯನ್ನು ನಿಮಗೆ ತೋರಿಸುವನು; ಅಲ್ಲಿ ಸಿದ್ಧ ಮಾಡಿರಿ ಎಂದು ಹೇಳಿ ಕಳುಹಿಸಿದನು. ಅವರು ಹೊರಟು ಆತನು ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು (ಲೂಕ 22:8-13).

**ಭೋಜನದ ದಿನ**

ಯೇಸು ತಿಳಿಸಿದ ಕರ್ತನ ಭೋಜನದ ನಂತರದ, ಭೋಜನ ದಿನದ ಕುರಿತು

ಪಂಡಿತರುಗಳು ತಮ್ಮದೇ ಆದ ತರ್ಕವನ್ನು ಹೊಂದಿರುವರು. ಇತರೆ ಸುವಾರ್ತೆಗಳಿಗಿಂತ ಯೋಹಾನನ ಸುವಾರ್ತೆಯಲ್ಲಿ ಈ ವಿಚಾರವು ವ್ಯತ್ಯಾಸಗೊಂಡಿದೆ ಎಂದು ತರ್ಕಿಸಲಾಗಿದೆ.

ಆಸಕ್ತಿಕರವಾಗಿದ್ದರೂ, ಕರ್ತನ ಭೋಜನದ ದಿನದ ತರ್ಕ ಅನಗತ್ಯ ಯಾಕಂದರೆ ಹಳೆ ಒಡಂಬಡಿಕೆಯಲ್ಲಿನ ಹುಳಿಯಲ್ಲಿದ ರೊಟ್ಟಿಗಳು ಹಾಗೂ ಪಸ್ಕ ಹಬ್ಬದ ನಡುವೆ ವ್ಯತ್ಯಾಸವಿದೆ (ಯಾಜಕಕಾಂಡ 23:5, 6; ಅರಣ್ಯಕಾಂಡ 28:16, 17). ಮೊದಲನೇ ತಿಂಗಳಿನ ಹದಿನಾಲ್ಕನೆಯ ದಿನದಂದು ಪಸ್ಕದ ಕುರಿಯನ್ನು ಕೊಯ್ದು ಹಬ್ಬ ಮಾಡಿದರು (ವಿಮೋಚನಕಾಂಡ 12:3-8; ಅರಣ್ಯಕಾಂಡ 9:2-5). ಹದಿನೈದು ದಿನಗಳ ನಂತರ, ಹುಳಿಯಿಲ್ಲದ ರೊಟ್ಟಿಗಳ ಹಬ್ಬವನ್ನು ಆಚರಿಸಿದರು. ಅದು ಏಳು ದಿನಗಳ ಕಾಲ ಮುಂದುವರೆಯಿತು.[1]

ಹೊಸ ಒಡಂಬಡಿಕೆಯ ದಿನಗಳಂದು ಈ ಎರಡೂ ಹಬ್ಬಗಳನ್ನು ಒಂದೇ ದಿವಸದಲ್ಲಿ ಆಚರಿಸಿದರು (ಮಾರ್ಕ 14:1, 12). ಇದರ ಕುರಿತು ಯೋಹಾನನ ಸಂವಾದವನ್ನು ಗಮನಿಸಬಹುದು.

ಯೋಹಾನನು ಯೆಹೂದ್ಯರ ಸಮಯಕ್ಕನುಗುಣವಾಗಿ ತಿಳಿಸದೆ, ರೋಮಾಪುರದವರ ಸಮಯವನ್ನು ತಿಳಿಸಿರುವನು. ಇಲ್ಲದೆ ಹೋದರೆ ಮಾರ್ಕ ಯೋಹಾನನಿಗಿಂತ ಭಿನ್ನವಾಗಿರುತ್ತದೆ. ಉದಾಹರಣೆಗೆ, ಆರನೇ ತಾಸಿನಲ್ಲಿ ಯೆಹೂದ್ಯರು ಯೇಸುವನ್ನ ಶಿಲುಬೆಗೆ ಹಾಕಬಹುದೆಂದು ಪಿಲಾತನು ಒಪ್ಪಿದನು ಎಂದು ಯೋಹಾನನು ತಿಳಿಸಿರುವನು (ಯೋಹಾನ 19:14), ಆದರೆ ಮಾರ್ಕನು ಮೂರನೇ ತಾಸು ಎಂದು ತಿಳಿಸಿರುವನು (ಮಾರ್ಕ 15:25).

ಮೊದಲನೇ ಶತಮಾನದ ಅಂತ್ಯದಲ್ಲಿ ಯೋಹಾನನು ಎಫೆಸದವರಿಗೆ ಬರೆಯುವಾಗ ರೋಮಾಪುರರ ಲೆಕ್ಕದಂತೆ, ರಾತ್ರಿಯ ಜಾವದಿಂದಲೂ, ಮಧ್ಯಾಹ್ನದ ಸಮಯದಿಂದಲೂ ಲೆಕ್ಕ ಹಾಕಿರಬಹುದು.[2] ಯೋಹಾನನ್ನು ಬರವಣಿಗೆಯಿಂದ ತಿಳಿದ ಸಮಯವನ್ನು ಸರಳವಾಗಿ ಅಳವಡಿಸಿಕೊಳ್ಳಬಹುದು. ಇದು ಸತ್ಯವಾಗಿದರೆ, ಸರಿಯಾದ ಸಮಯದ ಗ್ರಹಿಕೆ ತಪ್ಪಾಗುತ್ತದೆ.

> ಕಡೇಯ ಭೋಜನವು, ಪಸ್ಕದ ಊಟವೆಂಬ ... ವಿಚಾರದಲ್ಲಿ ಪಂಡಿತರು ತರ್ಕಿಸಿದ್ದಾರೆ. ಸುವಾರ್ತೆಗಳು ಅದು ಸರಿಯೆನ್ನುತ್ತವೆ (ಮತ್ತಾಯ 26:17). ಆದರೆ ಯೋಹಾನನು ಸಂದೇಹಿಸಿದ್ದಾನೆ ಯೋಹಾನ 19:14 ಆದರೆ ಇತರೆ ಸುವಾರ್ತೆಗಳೊಂದಿಗೆ ಘರ್ಷಣೆ ಅನಗತ್ಯ ಹಾಗೂ "ಪಸ್ಕದ ಸೌರಣೆಯ ದಿನವನ್ನು" (RSV) "ಪಸ್ಕದ ವಾರ" ಎನ್ನಬಹುದು (NIV). ಅಂದರೆ ಶುಕ್ರವಾರವು "ಪಸ್ಕದ ಸಾರಣೆಯ ದಿನ" ಎಂದಿದೆ, ಯಾಕೆಂದರೆ ಪ್ರತಿ ಶುಕ್ರವಾರವು ಸೌರಣೆಯ ದಿನವಾಗಿತ್ತು. ಅದು ಹುಳಿಯಿಲ್ಲದ ರೊಟ್ಟಿಗಳ ಹಬ್ಬ ಅಂದರೆ ಪಸ್ಕದ ವಾರ ಎಂಬ ಅರ್ಥವಿದೆ.[3]

ಯೋಹಾನನು ಪ್ರಯೋಗಿಸಿದ ರೋಮಾಯರ ಸಮಯವನ್ನು ಸದ್ದುಕಾಯರು ಆಚರಣೆಗೆ ತಂದಿದ್ದರು.

> ಪಸ್ಕದ ಕುರಿಗಳನ್ನು ಕೊಯ್ಯುವ ಸಮಯದಲ್ಲಿಯೇ, ಯೇಸುವನ್ನು ಶಿಲುಬೆಗೆ ಹಾಕಿದ್ದರು. ಅದನ್ನು ನಿಸಾನ್ 14ನೇಯ ದಿನ, ಅದು ಗುರುವಾರದ ಸೂರ್ಯಸ್ತಮಾನದಲ್ಲಿ ಆರಂಭವಾಗಿತ್ತು. ಅದು ಶುಕ್ರವಾರದ ಸೂರ್ಯಸ್ತಮಾನದವರೆಗೂ ಅಂತ್ಯಗೊಂಡಿತ್ತು. ಅದು ಕುರಿಗಳನ್ನು ಕೊಯ್ಯುವ ಸಾಮಾನ್ಯ ಸಮಯವಾಗಿತ್ತು, ಆದರೆ ದೇವಾಲಯದ ಅಧಿಕಾರಿಗಳು ಗುರುವಾರ ಸಾಯಾಂಕಾಲದಲ್ಲೂ ಕುರಿಗಳನ್ನು ಕೊಯ್ಯುವದಕ್ಕೆ ಅನುಮೋದಿಸಿದ್ದರು. ಆದ್ದರಿಂದ ಯೇಸುವಿನ ವಿರೋಧಿಗಳು ಇನ್ನು ಪಸ್ಕದ ಹಬ್ಬವನ್ನು ಆಚರಿಸಲಿಲ್ಲ ಎಂಬ ವಿಚಾರವು ಇದರಲ್ಲಿರುತ್ತವೆ (ಯೋಹಾನ 18:28). ಅವರು ಶುಕ್ರವಾರ ಸಾಯಂಕಾಲ ಈ ಕಾರ್ಯವನ್ನು ಮಾಡಲಿದ್ದರು (ಯೋಹಾನ 18:28). ಅಂದರೆ ನಿಸಾನ್ 15 ನೇ ದಿನ. ಅದು ಸೂರ್ಯಸ್ತಮಾನದಲ್ಲಿ ಆರಂಭವಾಗಲಿತ್ತು.[4]

ಯೆಹೂದ್ಯರ ದಿನದ ಆರಂಭದಲ್ಲಿ ಕರ್ತನ ಆಚರಣೆ ಆರಭವಾಗಿತ್ತು (ಮತ್ತಾಯ 26:20; ಮಾರ್ಕ 14:17). ರೋಮಾಪುರರ ಪ್ರಕಾರ ಗುರುವಾರ ಸಾಯಂಕಾಲ 6:00 ಗಂಟೆಯ ನಂತರ ಮರುದಿನ ಮುಂಜಾನೆ, ಹತ್ತು ತಾಸುಗಳ ನಂತರ ಯೇಸು ಕ್ರೂಜಿತನಾದನು.

> ಸಬ್ಬತ್ತಿನ ಹಿಂದಿನ ದಿನವಾದ ಶುಕ್ರವಾರದಂದು ಯೇಸು ಕ್ರೂಜಿತನಾದನು (ಮಾರ್ಕ 15:42, 43; ಲೂಕ 23:46, 54; ಯೋಹಾನ 19:14, 30, 32) ಸಬ್ಬತ್ ನಂತರದ ನಸುಕು - ಆದ್ದರಿಂದ ಭಾನುವಾರವು ವಾರದ ಮೊದಲನೆಯ ದಿನವಾಯಿತು - ಆತನು ಎದ್ದಿದ್ದಾನೆ ಎಂಬ ಸುದ್ದಿಯನ್ನು ಕೆಲವು ಸ್ತ್ರೀಯರು ಕೇಳಿದರು (ಮತ್ತಾಯ [28]:1, 6; ಮಾರ್ಕ 16:2, 6; ಲೂಕ 24:1, 6; ಯೋಹಾನ 20:1).[5]

**ಕರ್ತನ ಭೋಜನದ ಕ್ರಮ (ಸಂಯೋಜನೆ)**

ಪಸ್ಕದ ಊಟವು ಯೇಸುವಿಗೆ ಪ್ರಮುಖ ಅಂಶವಾಗಿತ್ತು:

> ಗಳಿಗೆ ಬಂದಾಗ ಆತನು ತನ್ನ ಹನ್ನೆರಡು ಮಂದಿ ಅಪೊಸ್ತಲರ ಸಂಗಡ ಊಟಕ್ಕೆ ಕೂತುಕೊಂಡನು ಆಗ ಆತನು ಅವರಿಗೆ, "ನಾನು ಶ್ರಮೆ ಅನುಭವಿಸುವದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವದಕ್ಕೆ ಕೂತುಹಲದಿಂದ ಅಪೇಕ್ಷಿಸಿದ್ದೇನೆ" (ಲೂಕ 22:14, 15).

ಯೇಸುವಿನ ಮರಣದ ಛಾಯೆಯು ಆತನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಈ ಹಿಂದೆ ಆತನು ಮನನೊಂದವನಾಗಿದ್ದನು (ಲೂಕ 12:50). *"ಸುನೆಚ್ಚೊ"* ಅಂದರೆ ಕ್ರೂಜೆಯ ಮರಣದ ನಿಮಿತ್ತ ಆತನು ಗೆತ್ಸೇಮನೆ ತೋಟದಲ್ಲಿ ವೇದನೆಗೊಂಡನು. "ನನ್ನ ಆತ್ಮವು ಮರಣಕ್ಕೊಳಗಾಗುವಷ್ಟು ದುಃಖಕ್ಕೆ ಒಳಗಾಗಿದೆ ಅಂದನು" (ಮತ್ತಾಯ 26:38ಎ). ಆತನು ಮನಗುಂದಿ ಪ್ರಾರ್ಥಿಸುವಾಗ, ಆತನ ಬೆವರು ರಕ್ತದೋಪಾದಿಯಲ್ಲಿ ಹರಿಯಿತು (ಲೂಕ 22:44).

ಪಸ್ಕದ ಊಟವನ್ನು ಸಾಮಾನ್ಯವಾಗಿ ನೆಲದ ಮೇಲೆ ಕುಳಿತು ತಿನ್ನಬೇಕಿತ್ತು. ಆದರೆ ಅವರು ಮೇಜಿನ ಮೇಲೆ ಕೂತುಕೊಂಡರು. ಆಗ ಯೋಹಾನನು ಯೇಸುವಿನ ಎದೆಗೆ ಒರಗಿ ಕುಳಿತ್ತಿದ್ದನು (ಯೋಹಾನ 13:23). ಆತನು ಅವರೊಂದಿಗೆ ಊಟಮಾಡಲು ಅಪೇಕ್ಷೆ ಪಟ್ಟನು (ಲೂಕ 22:15) ಎಂಬ ವಿಚಾರವು ಆತನು ಅವರ ಮೇಲೆ ಇಟ್ಟಿರುವ ಪ್ರೀತಿಯ ದ್ಯೋತಕವಾಯಿತು (ಯೋಹಾನ 13:1), ಹಾಗೂ ಅವರ ವೈಯಕ್ತಿಕವಾದ ಉತ್ತೇಜನವನ್ನು ಬಯಸಿದನು (ಮತ್ತಾಯ 26:40).

ಪಸ್ಕದ ದಿನವನ್ನು ಯೇಸು ಮತ್ತು ಆತನ ಶಿಷ್ಯರು ಯೆಹೂದ್ಯರ ಪದ್ಧತಿಯ ಮೇರೆಗೆ ಅನುಸರಣೆ ಮಾಡಿರಬಹುದು. ಅವರು ಪದ್ಧತಿಗನುಗುಣವಾಗಿ ನಾಲ್ಕು ಪಾತ್ರಗಳನ್ನು ಬಳಸಿರಬಹುದು ಅವುಗಳು ಸಂತೋಷದ ಗುರುತುಗಳಾಗಿದ್ದವು.[6] ಪಂಡಿತರು ಅವುಗಳ ಕುರಿತು ಈ ಮುಂದಿನ ವಿವರಗಳನ್ನು ನೀಡಿರುವರು:

- ಪೀಠಿಕೆ - ಕೃತಜ್ಞತಾ ಪ್ರಾರ್ಥನೆ ಪ್ರಥಮ ಪಾತ್ರೆಯಲ್ಲಿ ಕುಡಿದ ನಂತರ ಹಸುರಾದ ಹಾಗೂ ಕಹಿಯಾದ ಸೊಪ್ಪನ್ನು ತಿನ್ನುತ್ತಿದ್ದರು (ಐಗುಪ್ತದ ದಾಸತ್ವದ ನೆನಪಿಗಾಗಿ) ಮತ್ತು ಹಣ್ಣಿನ ಚಟ್ನಿಯನ್ನು ತಿನ್ನುತ್ತಿದ್ದರು. ಒಬ್ಬ ಮಗನು ತನ್ನ ತಂದೆಗೆ ಕೇಳಿದ ಪ್ರಶ್ನೆಗೆ, ತಂದೆಯು ಹೇಳಿದ ಉತ್ತರ.
- ಬರಹ - ಪಸ್ಕದ ಕಥೆಯ ನಂತರ, ಸಭೀಕರು 113 ಹಾಗೂ 114 ನೇ ಕೀರ್ತನೆಯನ್ನು ಹಾಡಿ ನಂತರ ಎರಡನೆ ಪಾತ್ರೆಯನ್ನು ಕುಡಿಯುತ್ತಿದ್ದರು.
- ಆಹಾರ - ಆಶೀರ್ವಾದದ ಪ್ರಾರ್ಥನೆಯ ನಂತರ, ಹುಳಿಯಿಲ್ಲದ ರೊಟ್ಟಿಯನ್ನು

ಕುರಿಯ ಮಾಂಸದೊಂದಿಗೆ ಬುಜಿಸಿದರು. ಕುರಿಮರಿಯ ಮಾಂಸ ತಿಂದ ನಂತರ ಮೂರನೆಯ ಪಾತ್ರೆಯಲ್ಲಿ ಪಾಲು ತಕ್ಕೊಳ್ಳುತ್ತಿದ್ದರು.

- ಮುಕ್ತಾಯ - ಕೀರ್ತನೆ 115:1-18 ಹಾಡಿನ ನಂತರ ಜನರು ನಾಲ್ಕನೆಯ ಪಾತ್ರೆಯಲ್ಲಿ ಕುಡಿದರು.

## ಸ್ಮರಣೆಯ ಒಂದು ಹೊಸ ಹಬ್ಬ (ಲೂಕ 22)

ಅಪೊಸ್ತಲರ ಸಂಗಡ ಕಡೇ ಭೋಜನವನ್ನು ಮಾಡಿದ ನಂತರ, ಹುಳಿಯಿಲ್ಲದ ರೊಟ್ಟಿ ಮತ್ತು ದ್ರಾಕ್ಷಾರಸದ ಕ್ರಮವನ್ನು ಯೇಸು ತಿಳಿಸಿದನು. ಲೂಕ 22:17ರಲ್ಲಿ ಯೇಸು ಎರಡನೆಯ ಪಾತ್ರೆಯನ್ನು ಬಳಸಿದನು ಎಂಬ ಪ್ರತೀತಿ. ಲೂಕ 22:20ರಲ್ಲಿರುವ "ಕರ್ತನ ಭೋಜನವು ಮೂರನೆಯ ಪಾತ್ರೆಯಾಗಿತ್ತು. ಪಸ್ಕದ ಊಟದ ನಂತರ ಯೇಸು ಮೂರನೆಯ ಪಾತ್ರೆಯನ್ನು ಬಳಸಿದನು."[7]

> [ಆಶೀರ್ವಾದದ ಪಾತ್ರೆ] ಯೆಹೂದ್ಯರ ಪದ್ಧತಿಯ ಪಸ್ಕದ ಊಟದ ನಂತರದ ಮೂರನೆಯ ಪಾತ್ರೆಯಾಗಿತ್ತು. ನಾಲ್ಕರಲ್ಲಿ ಮೂರು ಪಾತ್ರೆಗಳಲ್ಲಿ ಜನರು ಪಾಲುದಾರರಾಗುತ್ತಿದ್ದರು. ಈ ಮೂರನೆಯ ಪಾತ್ರೆ ವಿಮೋಚನಕಾಂಡ 6:6, 7ರಲ್ಲಿ, ದೇವರು ಇಸ್ರಾಯೇಲ್ಯರಿಗೆ ನೀಡಿದ ಮೂರನೆಯ ವಾಗ್ದಾನವಾಗಿತ್ತು. ಪಾಪ ಪರಿಹಾರಕ್ಕಾಗಿ ಯೇಸು ಸುರಿಸಿದ ರಕ್ತಕ್ಕೆ ಸೂಚನೆಯಾಗಿತ್ತು ...[8]

ಪಾತ್ರೆಯ ವಿಚಾರದಲ್ಲಿ ಯೇಸು ಮಾಡಿದ ಕಾರ್ಯವನ್ನು ಮತ್ತಾಯ ಮಾರ್ಕ ಹಾಗೂ ಲೂಕನು ದಾಖಲಿಸಿದ್ದಾರೆ. ಆದರೆ ಲೂಕನು ಯೇಸು ರೊಟ್ಟಿಯನ್ನು ನೀಡುವ ಮೊದಲು ಮಾಡಿದ ಕಾರ್ಯವನ್ನು ತಿಳಿಸಿದ್ದಾನೆ (ಲೂಕ 22:18, 19).

ಲೂಕನು ದಾಖಲಿಸಿರುವ ವಿಚಾರವೇನೆಂದರೆ:

- ಯೇಸು ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರ ಮಾಡಿದನು (ವಚನ 17ಎ).
- ಪಾತ್ರೆಯಲ್ಲಿ ಅವರೆಲ್ಲರು "ಪಾಲುದಾರರಾಗಬೇಕೆಂದು" ತಿಳಿಸಿದನು (ವಚನ 17ಬಿ). "ಪಾಲು"[9] ಎಂಬುದನ್ನು "ವಿಭಾಗಿಸು" ಎಂಬ ಅರ್ಥ.[10] ಆ ಪಾತ್ರೆಯಿಂದ, ತಮ್ಮಲ್ಲಿದ್ದ ಪಾತ್ರೆಗೆ ಸುರಿದುಕೊಳ್ಳುತ್ತಿದ್ದರು.
- ಆ ಸಮಯದಲ್ಲೇ ಅದನ್ನು ಕುಡಿಯಬೇಕೆಂದು ಹೇಳಲಿಲ್ಲ.
- ದೇವರ ರಾಜ್ಯವು ಬರುವವರೆಗೆ ತಾನು ಇದನ್ನು ಕುಡಿಯುವದಿಲ್ಲ ಎಂದು ಶಪಥ ಮಾಡಿದನು (ವಚನ 18).
- ರೊಟ್ಟಿಗಾಗಿ ಪ್ರಾರ್ಥಿಸಿ ಅದನ್ನು ಅವರಿಗೆ ನೀಡಿದನು, ಅವರು ಅದನ್ನು ತಿಂದರು (ವಚನ 19).
- ನಂತರ ಅವರು ತಮ್ಮ ಪಾತ್ರೆಗಳಿಗೆ ಸುರಿದುಕೊಂಡಿದ್ದ ಪಾತ್ರೆಯನ್ನು ತೆಗೆದುಕೊಂಡು ದೇವ ಸ್ತೋತ್ರ ಮಾಡಿದನು (ವಚನ 20ಎ).
- ಆ ಪಾತ್ರೆಯು ಹೊಸ ಒಡಂಬಡಿಕೆಯ ತನ್ನ ರಕ್ತ ಎಂದು ಹೇಳಿದನು (ವಚನ 20ಎ; ಮತ್ತಾಯ 26:27).
- ವಿಭಾಗ ಮಾಡಿ ಕೊಂಡಿದ್ದ ಪಾತ್ರೆಯಲ್ಲಿನ ಪಾನವನ್ನು ಅಪೊಸ್ತಲರು ಪ್ರಾಯಶಃ ಒಟ್ಟಾಗಿ ಕುಡಿದಿರಬಹುದು.

## ಅಲ್ಲಿದ್ದವರು

ಪಸ್ಕದ ಊಟದಲ್ಲಿ ಹನ್ನೆರಡು ಜನ ಅಪೊಸ್ತಲರು ಇದ್ದರು ಎಂದು ಮೂರು

ಸುವಾರ್ತೆಗಳಲ್ಲಿ ಗಮನಿಸುತ್ತೇವೆ:

> ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಊಟಕ್ಕೆ ಕೂತುಕೊಂಡನು (ಮತ್ತಾಯ 26:20).
>
> ಶಿಷ್ಯರು ಹೊರಟು ಪಟ್ಟಣಕ್ಕೆ ಹೋಗಿ ಆತನು ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು (ಮಾರ್ಕ 14:17).
>
> ಗಳಿಗೆ ಬಂದಾಗ ಆತನು ತನ್ನ ಹನ್ನೆರಡು ಮಂದಿ ಅಪೊಸ್ತಲರ ಸಂಗಡ ಊಟಕ್ಕೆ ಕೂತುಕೊಂಡನು (ಲೂಕ 22:14).

ಊಟದ ನಂತರ ಯೂದನು ರಾತ್ರಿಯಲ್ಲಿ ಮರೆಯಾದನು (ಯೋಹಾನ 13:2-4, 30). ನಂತರದಲ್ಲಿ, ಯೇಸು ತನ್ನ ಹನ್ನೊಂದು ಮಂದಿ ಅಪೊಸ್ತಲರಿಗೆ ದೊಡ್ಡ ಪ್ರಸಂಗವನ್ನು ನೀಡಿದನು (ಯೋಹಾನ 13:31-16:33).

ಯೇಸುವಿನ ಸಲಹೆ ಸೂಚನೆಗಳನ್ನು ಪಡೆಯಲು ಅಪೊಸ್ತಲರು ಅಲ್ಲಿರಬೇಕಾದ ಪ್ರಮುಖ ಸಂಗತಿಯಾಗಿತ್ತು. ಇತರರನ್ನು ಹೊರತುಪಡಿಸಿ, ಅಪೊಸ್ತಲರಿಗೆ ಮಾತ್ರ ಪವಿತ್ರಾತ್ಮನ ಪ್ರೇರಣೆಯನ್ನು ಯೇಸು ನೀಡಿದನು (ಯೋಹಾನ 14:17, 26; 15:26, 27; 16:7, 13). ಅವರ ನಡುವಿನ ಚರ್ಚೆಯಲ್ಲಿ ಯೇಸು "ನೀವು" ಮತ್ತು "ನಾವು" ಎಂಬ ಪದಗಳನ್ನು ಬಳಸಿದ್ದನು (14:7-20, 25-31; 15:3-5, 19, 26, 27; 16:1, 2, 4-7, 10, 12-17, 19, 20, 22-28, 31-33). "ಬೇರೆಯವರು" ಎಂದಾಗ ಇತರರು ಎಂಬ ಅರ್ಥ (ಯೋಹಾನ 14:6; 15:13), "ಅವನು" (ಯೋಹಾನ 14:12, 21, 24; 15:5, 6, 12, 23), "ಯಾರಾದರು" (ಯೋಹಾನ 14:23; 15:6), ಮತ್ತು "ಅವರು" ಮತ್ತು "ಅವರಿಗೆ" (ಯೋಹಾನ 15:20-22, 24; 16:2, 4, 9).

ಅಪೊಸ್ತಲರಿಗೆ ಮಾತ್ರ ಯೇಸು ಈ ವಾಗ್ದಾನಗಳನ್ನು ಮಾಡಿದನು, ಇವರ ಸಂಗಡ ಪೌಲ ಪ್ರಕಟನೆ ಗ್ರಂಥದ ಹೊಸ ಒಡಂಬಡಿಕೆಯ ಪ್ರವಾದಿಗಳಿಗೂ ಇದನ್ನು ಮಾಡಿದನು (ಎಫೆಸ 3:3-5).

ಯೋಹಾನ 14-16 ರಲ್ಲಿ ಯೇಸುವಿನ ಸಂಗಡವಿದ್ದ ಅಪೊಸ್ತಲರಿಗೆ ಆತನು ಮಾತಾಡಿದನು.

- ಅವರು ಕಳವಳಪಡದೆಯೂ, ದುಃಖವಿಲ್ಲದೆಯೂ ಇರಬೇಕೆಂದು ಹೇಳಿದನು (ಯೋಹಾನ 14:1, 27; 16:6, 22).
- ಅವರು ಯೇಸುವಿನೊಂದಿಗೆ ಆರಂಭದಿಂದಲೂ ಇದ್ದವರು (ಯೋಹಾನ 14:25; 15:27).
- ಸಂಗತಿಗಳು ಜರುಗುವ ಮೊದಲೇ ಆ ಸಂಗತಿಗಳನ್ನು ಅವರಿಗೆ ತಿಳಿಸಿದ್ದನು (ಯೋಹಾನ 14:29; 16:4).
- ಆತನಿಂದ ಹೆಚ್ಚು ಮಾತುಗಳನ್ನು ಅವರು ಬಯಸಲಾರದೆಂದು ತಿಳಿಸಿದನು (ಯೋಹಾನ 14:30).
- ತಂದೆಯಿಂದ ಪಡೆದಿದ್ದನ್ನು ಅವರಿಗೆ ತಿಳಿಸಿದ್ದನು (ಯೋಹಾನ 15:15).
- ಅವರನ್ನು ಸಭಾಮಂದಿರದಿಂದ ಹೊರಹಾಕಿ ಕೊಲ್ಲುವರೆಂದು ತಿಳಿಸಿದ್ದನು (ಯೋಹಾನ 16:2).
- ಆತನು ಹೋಗುವ ಸ್ಥಳವನ್ನು ಕೇಳಬಾರದೆಂದನು (ಯೋಹಾನ 16:5).
- ಆತನು ಅವರಲ್ಲಿ ಸ್ವಲ್ಪಕಾಲ ಮಾತ್ರವಿರುವನು, ನಂತರ ಅವರು ಆತನನ್ನು

ಕಾಣುವರು ಅಂದನು (16:16-19).

- ಆತನು ಅವರೊಂದಿಗೆ ಸಾಮ್ಯರೂಪವಾಗಿ ಮಾತಾಡಿದ್ದನು (ಯೋಹಾನ 16:25).
- ಅವರು ಚದರಿ ಹೋಗುವರು ಎಂದು ಹೇಳಿದನು (ಯೋಹಾನ 16:32).

ಪವಿತ್ರಾತ್ಮನು ಅಪೊಸ್ತಲರಿಗೂ ಹಾಗೂ ಪ್ರವಾದಿಗಳಿಗೂ ಯೇಸುವಿನ ಉಪದೇಶವನ್ನು ತಿಳಿಸಿದ್ದನು (ಎಫೆಸ 3:5). ಅವರು ಸಭೆಯ ಅಸ್ತಿವಾರವಾಗಿದ್ದರು (ಎಫೆಸ 2:20). ಅಪೊಸ್ತಲರು ಯಾರ ತಲೆಯ ಮೇಲೆ ಕೈ ಇಡುತ್ತಿದ್ದರೂ ಅವರು ಸಹ (ಅಪೊಸ್ತಲರ ಕೃತ್ಯಗಳು 8:18; 19:6). ಪವಿತ್ರಾತ್ಮದಾನವನ್ನು ಹೊಂದುತ್ತಿದ್ದರು. ಅಪೊಸ್ತಲರು ವಿಶೇಷ ದಾನವನ್ನು ಹೊಂದಿದ್ದರು ಎಂದು ಪೌಲನು ತಿಳಿಸಿರುವನು: "ನಾನು ಹಿಂಸೆಯನ್ನು ಸ್ಥಿರಚಿತ್ತದಿಂದ ತಾಳಿಕೊಳ್ಳುವದರಲ್ಲಿಯೂ ಸೂಚಕಕಾರ್ಯಗಳನ್ನೂ ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದ್ದರಲ್ಲಿಯೂ ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು" (2 ಕೊರಿಂಥ 12:12).

ಪವಿತ್ರಾತ್ಮನ ಮೂಲಕವಾಗಿ ಅಪೊಸ್ತಲರಿಗೂ, ಹಾಗೂ ಪ್ರವಾದಿಗಳಿಗೂ ನೀಡಲ್ಪಟ್ಟ ಪ್ರೇರಣೆಯು, ಯೇಸುವಿನ ಬೋಧನೆಯ ಕುರಿತ ಭರವಸಕ್ಕೆ ಖಾತ್ರಿಯಾಗಿದೆ. ಆತನು ಅವರಿಗೆ ಎಲ್ಲವನ್ನು ತಿಳಿಸಿ, ಅವರ ನೆನಪಿಗೆ ಎಲ್ಲವನ್ನು ತಂದನು (ಯೋಹಾನ 14:26), ಹಾಗೂ ಸಕಲ ಸತ್ಯಕ್ಕೆ ಅವರನ್ನು ನಡೆಸಿದನು (ಯೋಹಾನ 16:12, 13).

ಈ ವರಗಳ ವಾಗ್ದಾನಗಳನ್ನು ಪಡೆದವರು, ಕರ್ತನ ಭೋಜನದಲ್ಲಿ ಪಾಲುದಾರರಾದರು. ಅಪೊಸ್ತಲರು ಮಾತ್ರ ತಮ್ಮ ಕೈಗಳನ್ನು ಇಡುವದರ ಮೂಲಕ ಅವುಗಳನ್ನು ವರ್ಗಾಹಿಸಬಹುದಾಗಿತ್ತು.

## ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆದದ್ದು

ಕರ್ತನ ಭೋಜನದ ನಂತರ ತಮ್ಮಲ್ಲಿ ಯಾರು ಶ್ರೇಷ್ಟರು ಎಂಬ ತರ್ಕವು ಶಿಷ್ಯರಲ್ಲಿ ಉಂಟಾಯಿತು. ಸೇವೆ ಮಾಡುವವನೇ ಶ್ರೇಷ್ಟನು ಎಂದು ಯೇಸು ತಿಳಿಸಿದನು (ಲೂಕ 22:24-27; ನೋಡಿರಿ ಯೋಹಾನ 13:3-17).

ಪ್ರಾಯೋಗಿಕವಾದ ಉತ್ತರವನ್ನು ನೀಡಲು, ಭೋಜನದ ನಂತರ ಯೇಸು ಎದ್ದು (ಯೋಹಾನ 13:1-4ಎ). ಸೊಂಟವನ್ನು ಕಟ್ಟಿಕೊಂಡು, ತನ್ನ ಶಿಷ್ಯರ ಪಾದಗಳನ್ನು ತೊಳೆದನು (ಯೋಹಾನ 13:4ಬಿ-10). ಆತನು ಅದನ್ನು ಮುಗಿಸಿ ನಂತರದಲ್ಲಿ, ಆತನು ಅವರಿಗೆ ಹೇಳಿದ್ದೇನೆಂದರೆ,

> ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ದಣಿಗಿಂತ ಆಳು ದೊಡ್ಡವನಲ್ಲ, ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ (ಯೋಹಾನ 13:15, 16).

ಲೂಕನು ಸಹ ಇದರ ವಿವರಣೆ ನೀಡಿ:

> ಯಾವನು ಹೆಚ್ಚಿನವನು? ಊಟಕ್ಕೆ ಕೂತವನೋ ಸೇವೆಮಾಡುವವನೋ? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವನಂತಿದ್ದೇನೆ (ಲೂಕ 22:27).

ಈ ಎರಡು ಹೇಳಿಕೆಗಳ ಹೊಂದಾಣಿಕೆಯಿಂದ, ಲೂಕ ಮತ್ತು ಯೋಹಾನರ ವಿಚಾರವನ್ನು ತರ್ಕಿಸಿರುವರು ಎಂದು ನಾವುಗಳು ಪರಿಗಣಿಸಬಹುದು. ಯೇಸು ಬಾಯಿ ಮಾತಿನಿಂದ

ಮಾತ್ರವಲ್ಲದೆ, ಶಿಷ್ಯರ ಪಾದಗಳನ್ನು ತೊಳೆದು ಪ್ರಾಯೋಗಿಕವಾದ ಕಾರ್ಯವನ್ನು ಮನದಟ್ಟು ಮಾಡಿರುವನು.[11]

ಈ ಕಾರ್ಯ ಮಾಡುವ ಮೊದಲೇ, ತನ್ನ ಶಿಷ್ಯರಲ್ಲಿ ಒಬ್ಬನು ತನ್ನನ್ನು ಹಿಡುಕೊಡುವನೆಂದು ಯೇಸು ಮುಂತಿಳಿಸಿದ್ದನು.

> ಮನುಷ್ಯಕುಮಾರನು ನೇಮಕವಾದ ಪ್ರಕಾರ ಹೊರಟುಹೋಗುತ್ತಾನೆ ಸರಿ; ಆದರೆ ಆತನನ್ನು ಹಿಡುಕೊಡುವ ಮನುಷ್ಯನ ಗತಿಯನ್ನು ಏನು ಹೇಳಲಿ ಅಂದನು. ಇದನ್ನು ಕೇಳಿ ಅವರು - ಇಂಥ ಕೆಲಸವನ್ನು ಮಾಡ ಬೇಕೆಂದಿರುವವನು ನಮ್ಮಲ್ಲಿ ಯಾವನಾಗಿರಬಹುದು ಎಂದು ಒಬ್ಬರನ್ನೊಬ್ಬರು ಕೇಳ ತೊಡಗಿದರು (ಲೂಕ 22:22, 23).

ಆ ಶಿಷ್ಯನು ಯಾರೆಂದು ಯೇಸುವಿನಿಂದ ತಿಳಿಯಬೇಕೆಂದು, ಪೇತ್ರನು ತನ್ನ ಬಳಿಯಲ್ಲಿದ್ದ ಯೋಹಾನನಿಗೆ ಹೇಳಿದನು. ಯೇಸು ರೊಟ್ಟಿಯನ್ನು ದ್ರಾಕ್ಷಾರಸದಲ್ಲಿ ಅದ್ದಿ ಅದನ್ನು ಯೂದನಿಗೆ ನೀಡುವ ಮೂಲಕ, ಅವನೇ ಆತನನ್ನು ಇಡುಕೊಡುವವನು ಎಂಬ ಸೂಚನೆಯನ್ನು ನೀಡಿದ್ದನು. ಸೈತಾನನು ಅವನಲ್ಲಿ ಸೇರಿಕೊಂಡು, ರಾತ್ರಿ ಸಮಯದಲ್ಲಿ ಯೇಸುವಿನ ಬಳಿಗೆ ರೋಮಾ ಅಧಿಕಾರಿಗಳನ್ನು ನಡೆಸಿದನು (ಯೋಹಾನ 13:21-30).

## ಸಾರಾಂಶ

ಕರ್ತನ ಭೋಜನದ ಆಚರಣೆಯು ಸಭೆಗೆ ಪ್ರಮುಖ ಅಂಶವಾಗಿದೆ. ಇದರ ಮೂಲಕ, ಯೇಸು ದೈಹೀಕವಾಗಿ ಲೋಕಕ್ಕೆ ಬಂದು, ಲೋಕದ ಪಾಪಕ್ಕಾಗಿ ಸತ್ತನು ಎಂಬ ಅಂಶದ ನೆನಪಾಗಿದೆ. ಸಭೆಯು ಇದರಲ್ಲಿ ಪಾಲುದಾರರಾಗಿ ಆತನ ಮರಣ, ಪುನರುತ್ಥಾನ ಹಾಗೂ ಆತನ ಬರೋಣದ ಆರೈಸುವಿಕೆಯನ್ನು ಪ್ರಚುರಪಡಿಸುತ್ತದೆ. ಆತನು ಬರುವವರೆಗೆ ಕ್ರೈಸ್ತನು ಕರ್ತನ ಭೋಜನದ ಆಚರಣೆಯನ್ನು ಮಾಡಲೇಬೇಕು (1 ಕೊರಿಂಥ 11:26).

---

ಟಿಪ್ಪಣೆಗಳು

[1]ಓದಿರಿ ವಿಮೋಚನಕಾಂಡ 12:17, 18; 13:4-7; 34:18. [2]Emmett Russell, "Hour," *The New International Dictionary of the Bible,* ed. Merrill C. Tenney (Grand Rapids, Mich.: Zondervan Publishing House, 1987), 453. [3]Marvin R. Wilson, "Passover," *The International Standard Bible Encyclopedia,* ed. Geoffey W. Bromiley (Grand Rapids, Mich.: Wm. B. Eerdmans Publishing Co., 1986), 3:677-78. [4]Robert L. Thomas, ed., *A Harmony of the Gospels with Explanations and Essays, Using the Text of the New American Standard Bible* (Chicago: Moody Press, 1978), 322. [5]William Hendriksen, *Exposition of the Gospel According to Luke,* New Testament Commentary (Grand Rapids, Mich.: Baker Book House, 1978), 954. [6]Wilson, 677. [7]Ibid., 678. [8]Thomas, 213. [9]Hendriksen, 954. [10]J. Reiling and J. L. Swellengrebel, *A Translator's Handbook on the Gospel of Luke* (New York: United Bible Societies, 1971), 686. ಯೂದಯ ಪಾರಂಪರ್ಯದ ಪ್ರಕಾರ ಪಸ್ಕಾದಲ್ಲಿ ಮುಖ್ಯ ಬಟ್ಲಿನಿಂದ ತಮ್ಮ ಬಟ್ಲುಗೆ ಸುರಿದು ಕೊಳ್ಳುವರು. ನಂತರ, ಎಲ್ಲರೂ ಒಂದೇ ಸಮಯದಲ್ಲಿ ಕುಡಿಯುವರು. ಯೇಸು ಮತ್ತು ಆತನ ಅಪೊಸ್ತಲರು ಇದೇ ಪದ್ಧತಿ ಯನ್ನು ಅವಲಂಭಿಸಿರಬಹುದು.

[11]ಪಾದ ತೊಳೆಯುವುದು ಎಂಬುದು ಒಂದು ವಿಧಿಯಾದ ಕಾರ್ಯವಲ್ಲದೆ, ಆ ಕಾರ್ಯದಲ್ಲಿನ ತಾಳ್ಮೆಯ ಸೇವೆಯನ್ನು ಯೇಸು ಬೋಧಿಸಿದರು. ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳು ಅದನ್ನು ವಿನಯವುಳ್ಳ ಸೇವೆಯೆಂದು ಹೇಳಿಕೊಂಡರು (ಲೂಕ 7:38, 44; 1 ತಿಮೊಥೆ 5:10), ಅದು

ಒಂದು ಆರಾಧಿಸುವ ಕಾರ್ಯವಲ್ಲ. ಹಳೆ ಒಡಂಬಡಿಕೆಯಲ್ಲಿ ಕುಟುಂಬದ ಸನ್ನಿವೇಶದಲ್ಲಿ ಕೊಳಯಾದ ಪಾದಗಳನ್ನು ತೊಳೆಯುವ ಉದ್ದೇಶವಾಗಿತ್ತು (ಆದಿಕಾಂಡ 18:4; 19:2; 24:32; 43:24; ನ್ಯಾಯಸ್ಥಾಪಕರು 19:21; 1 ಸಮುವೇಲು 25:41; 2 ಸಮುವೇಲು 11:8; ಪರಮಗೀತ 5:3) ಅಥವಾ ಪರಿಶುದ್ಧ ಸ್ಥಳಕ್ಕೆ ಸೇವೆ ಸಲ್ಲಿಸಲು ಹೋಗುವ ಮುನ್ನ ಯಾಜಕರು ಪಾದಗಳನ್ನು ತೊಳೆದುಕೊಳ್ಳುವರು (ವಿಮೋಚನಕಾಂಡ 30:19-21; 40:30, 31).

## ಕಾಲಗಣನೀಯ ಶಾಸ್ತ್ರ: ಯೆಹೂದ್ಯರ ಸಮಯವನ್ನು ರೋಮಾಯರ ಕಾಲಕ್ಕೆ ಹೋಲಿಕೆ

ಪಸ್ಕ ಹಬ್ಬದಿಂದ, ಕರ್ತನ ಭೋಜನದ, ಹಾಗೂ ಕ್ರಿಸ್ತನ ಮರಣದವರೆಗಿನ ಸಮಯದ ಹೊಂದಿಕೆ:

| ಯೆಹೂದ್ಯರ ಸಮಯ | | ರೋಮಾಯರ ಸಮಯ |
|---|---|---|
| | **ಪಸ್ಕ ಹಾಗೂ ಕರ್ತನ ಭೋಜನ** | |
| (ಮತ್ತಾಯ 26:20; ಮಾರ್ಕ 14:17)<br>ಶುಕ್ರವಾರ ಆರಂಭದ ತಕ್ಷಣ | ಸಾಯಂಕಾಲ | ಗುರುವಾರ, 6 ಘಂಟೆಯ ನಂತರ |
| | **ಯೇಸುವಿನ ವಿಚಾರಣೆಯ ಅಂತ್ಯ** | |
| ಶುಕ್ರವಾರ, ಬೆಳಿಗ್ಗೆ | | (ಯೋಹಾನ 19:14)<br>ಮುಂಜಾನೆ 6 ಘಂಟೆ |
| | **ಶಿಲುಬೆಗೆ ಹಾಕಲ್ಪಟ್ಟದ್ದು** | |
| (ಮಾರ್ಕ 15:25)<br>ಶುಕ್ರವಾರ (ಮುಂಜಾನೆಯ) 3ನೇ ತಾಸು | | ಮುಂಜಾನೆ 9 ಘಂಟೆ |
| | **ಮೂರು ತಾಸಿನ ಕತ್ತಲು** | |
| (ಮತ್ತಾಯ 27:45; ಮಾರ್ಕ 15:33; ಲೂಕ 23:44)<br>ಶುಕ್ರವಾರ 6ನೇ ತಾಸಿನ ಆರಂಭ<br>ಶುಕ್ರವಾರ 9ನೇ ಅಂತ್ಯ | | ಶುಕ್ರವಾರ ಮಧ್ಯಾಹ್ನ 12<br>ಶುಕ್ರವಾರ ಸಾಯಂಕಾಲ 3 ಘಂಟೆ |